ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ಉದಯ ಕಾಲ ಕನ್ನಡ   ದಿನಾಂಕ : DATE : 16/07/2019

# ಶಾಸಕ ರೋಷನ್ ಬೇಗ್ ಎಸ್‌ಐಟಿ ಪೊಲೀಸ್ ವಶ

ಈ ಸುದ್ದಿಲೋಕ
ಬೆಂಗಳೂರು



ಐಎಂಎ ಬಹುಕೋಟಿ ವಂಚನೆ ಪ್ರಕರಣದಲ್ಲಿ ಶಿವಾಜಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ರೋಷನ್ ಬೇಗ್ ಅವರನ್ನು ವಿಶೇಷ ತನಿಖಾ ತಂಡ ಸೋಮವಾರ ರಾತ್ರಿ ವಶಕ್ಕೆ ಪಡೆದುಕೊಂಡಿದ್ದು, ವಿಚಾರಣೆ ಬಳಿಕ ಬಂಧಿಸುವ ಸಾಧ್ಯತೆ ಇದೆ.

ಮುಂಬಯಿಗೆ ತೆರಳಲು ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಿದ್ದ ರೋಷನ್ ಬೇಗ್, ಇನ್ನೇನು ವಿಮಾನ ಹತ್ತುವ ಸಿದ್ಧತೆಯಲ್ಲಿದ್ದಾಗಲೇ ಎಸ್‌ಐಟಿ ತಂಡ ಅವರನ್ನು ರಾತ್ರಿ 11 ಗಂಟೆ ಸುಮಾರಿಗೆ ವಶಕ್ಕೆ ಪಡೆಯಿತು. ಬಳಿಕ ವಿಚಾರಣೆಗಾಗಿ ಅವರನ್ನು ಎಸ್‌ಐಟಿ ಕಚೇರಿಗೆ ಕರೆದುಕೊಂಡು ಹೋಗಲಾಯಿತು.

ರೋಷನ್ ಬೇಗ್ ಅವರು ಬಿಜೆಪಿ ನಾಯಕ ಯಡಿಯೂರಪ್ಪ ಅವರ ಆಪ್ತ ಸಂತೋಷ್ ಜತೆ ವಿಮಾನದಲ್ಲಿ ಮುಂಬಯಿಗೆ ಹಾರಲು ಯತ್ನಿಸುತ್ತಿದ್ದ ವೇಳೆ ಎಸ್‌ಐಟಿ ತಂಡ ವಶಕ್ಕೆ ಪಡೆದಿದೆ. ಐಎಂಎ ಪ್ರಕರಣದಲ್ಲಿ ವಿಚಾರಣೆಗಾಗಿ ಈ ಕ್ರಮ ಕೈಗೊಂಡಿದೆ. ಎಸ್‌ಐಟಿ ತಂಡವನ್ನು ಕಂಡ ಕೂಡಲೇ ಸಂತೋಷ್ ಓಡಿಹೋಗಿದ್ದಾರೆ. ಬಿಜೆಪಿಯ ಯೋಗೇಶ್ವರ್ ಕೂಡ ಸ್ಥಳದಲ್ಲಿದ್ದರು. ಬಿಜೆಪಿ ನಾಯಕರು ಆರೋಪಿಯೊಬ್ಬರ ಪರಾರಿಗೆ ಸಹಾಯ ಮಾಡಿರುವುದು ನಾಚಿಕೆಗೇಡು. ಇದು ಬಿಜೆಪಿಯು ಸರಕಾರವನ್ನು ಅಸ್ಥಿರಗೊಳಿಸುವಲ್ಲಿ ನೇರವಾಗಿ ಭಾಗಿಯಾಗಿರುವುದನ್ನು ಸ್ಪಷ್ಟಪಡಿಸಿದೆ.

-ಕುಮಾರಸ್ವಾಮಿ ಸಿಎಂ

# ರೋಷನ್ ಬೇಗ್ ಎಸ್‌ಐಟಿ ವಶಕ್ಕೆ

» ಮೊದಲ ಪುಟದಿಂದ

ಐಎಂಎ ಮಾಲೀಕ ಮನ್ಸೂರ್ ಖಾನ್ ದೇಶದಿಂದ ಪರಾರಿ ಆಗುವ ಮೊದಲು ಬಿಡುಗಡೆ ಮಾಡಿದ್ದ ಆಡಿಯೊದಲ್ಲಿ, ಶಾಸಕ ರೋಷನ್ ಬೇಗ್ ತಮ್ಮಿಂದ ಕೋಟಿಗಟ್ಟಲೆ ಹಣ ಪಡೆದಿದ್ದರು ಎಂದು ಆರೋಪಿಸಿದ್ದರು. ನಂತರದ ಬೆಳವಣಿಗೆಯಲ್ಲಿ ಎಸ್ ಐಟಿ ತಂಡ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಿತ್ತು.

ಇಷ್ಟೆಲ್ಲದರ ಬಳಿಕ ಸೋಮವಾರ ತಡರಾತ್ರಿಯಲ್ಲಿ ರೋಷನ್ ಬೇಗ್ ಅವರು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ವಿಮಾನ ಹತ್ತುವ ಸಿದ್ಧತೆಯಲ್ಲಿದ್ದರು.

**ಮುಂಬಯಿಯಿಂದ ದುಬೈಗೆ?:** ಅತೃಪ್ತ ಶಾಸಕರನ್ನು ಸೇರಿಕೊಳ್ಳಲು ರೋಷನ್ ಬೇಗ್ ಅವರು ಮುಂಬಯಿಗೆ ತೆರಳುತ್ತಿದ್ದಾರೆ ಎನ್ನುವ ಸಂಗತಿ ರಾಜಕೀಯ ವಲಯದಲ್ಲಿ ಹರಿದಾಡಿತ್ತು. ಆದರೆ, ಮುಂಬಯಿಗೆಂದು ಬೆಂಗಳೂರಿನಿಂದ ತೆರಳುತ್ತಿದ್ದ ರೋಷನ್ ಬೇಗ್ ಪುಣೆ ಮೂಲಕವೇ ದುಬೈಗೆ ಹಾರಿಬಿಡುವ ಸಾಧ್ಯತೆಗಳ ಬಗ್ಗೆಯೂ ಪೊಲೀಸ್ ವಲಯದಲ್ಲಿ ಅನುಮಾನಗಳು ಹರಿದಾಡಿದ್ದವು. ಈ ಎಲ್ಲಾ ಅನುಮಾನ, ಬೆಳವಣಿಗೆಗಳ ನಡುವೆಯೇ ಅವರನ್ನು ಎಸ್‌ಐಟಿ ತಂಡ ಬಂಧಿಸಿದೆ. ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ್ದ ರೋಷನ್ ಬೇಗ್ ಇತ್ತೀಚೆಗಷ್ಟೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

6